## ತರಕಾರಿ!

ನಮ್ಮ ಬ್ಯಾಂಕಿನ ಮ್ಯಾನೇಜರ್ ಬಿಹಾರ ಮೂಲದವರು. ಅಂದು ಸಂಜೆ ಮನೆಗೆ ಹೋದಾಗ ಅವರ ಪತ್ನಿ ಬ್ಯಾಗಿನಲ್ಲಿದ್ದ ಲಂಚ್ ಬಾಕ್ಸ್ ಜೊತೆಗೆ 150ರ ಬೆಲೆಯ ಕ್ಯಾಡ್ಬರೀಸ್ ಚಾಕ್ಲೇಟ್ ನೋಡಿ, 'ಇಷ್ಟು ಬೆಲೆಯ ಚಾಕ್ಲೇಟ್ ಯಾಕೆ ತಂದ್ರಿ? ಈ ಹಣದಲ್ಲಿ ಒಂದು ವಾರದ ಭಾಜೀ (ತರಕಾರಿ) ಆದ್ರೂ ಬರ್ತಿತ್ತು' ಎಂದರಂತೆ. ಅದಕ್ಕೆ ಮ್ಯಾನೇಜರ್, 'ಆ ಚಾಕ್ಲೇಟ್ ಅನ್ನು ಹಾಗೇ ಬ್ಯಾಗಿಗೆ ಹಾಕು; ದೀಪಾವಳಿಗೆಂದು ಎಲ್ಲಾ ಸಿಬ್ಬಂದಿಗೆ ಚಾಕ್ಲೇಟ್ ಕೊಟ್ಟಿದ್ದಾರೆ. ನಾಳೆ ಅದನ್ನು ವಾಪಸ್ ಕೊಟ್ಟು, ಅದರ ಬದಲಾಗಿ ತರಕಾರಿ ಕೊಡಲು ಹೇಳುವೆ' ಎಂದು ಪತ್ನಿಗೆ ಹೇಳಿದರಂತೆ

**ನಗರ ಗುರುದೇವ್ ಭಂಡಾರ್ಕರ್**



## ಬ್ಯುಟಿಫುಲ್...



ಕಲೆ: ಗಣೇಶ ಆಚಾರ್ಯ

ತಂಗಿಯ ಮಗಳು ಆನಂದಿಗೆ ಹೋಮ್‌ವರ್ಕ್ ಮಾಡಿಸುತ್ತಿದ್ದೆ. ಅವಳ ಇಂಗ್ಲಿಷ್ ಪದಸಂಪತ್ತನ್ನು ಬೆಳೆಸಲು ಕೆಲವು ಶಬ್ದಗಳನ್ನು ನಾನು ಉಚ್ಚರಿಸುವುದು, ಅವಳು ಅದರ ಸ್ಪೆಲ್ಲಿಂಗ್ ಬರೆಯುವುದು ನಡೆದಿತ್ತು. ತುಂಬಾ ಚೂಟಿಯಾಗಿರುವ ಆರು ವರ್ಷದ ಆನಂದಿ, ಒಂದೊಂದು ಶಬ್ದಕ್ಕೂ ಏನೇನೊ ತಮಾಷೆ ಮಾಡುತ್ತ ಬರೆಯುತ್ತಿತ್ತು. 'ಹೋಮ್' ಬರೆಯಲು ಹೇಳಿದೆ. 'ನಮ್ಮ ಹೋಮಾ, ನಿಮ್ಮ ಹೋಮಾ?' ಅನ್ನೋದು. 'ವಿಂಡೊ ಬರಿ' ಅಂದರೆ, 'ಬೆಡ್‌ರೂಮ್ ವಿಂಡೊ? ಹಾಲ್ ವಿಂಡೋ?' ಎಂದು ಕೇಳುವುದು, 'ಫ್ಯಾನ್' ಅಂದರೆ, 'ಟೇಬಲ್ ಫ್ಯಾನ್? ಸೀಲಿಂಗ್ ಫ್ಯಾನ್?' ಎನ್ನುವುದು ನಡೆದೇ ಇತ್ತು. ನಗು ಬಂದರೂ ನಗದೇ ಪಾಠ ಮಾಡುತ್ತಿದ್ದೆ. 'ಬ್ಯುಟಿಫುಲ್' ಬರೆಯಲು ಹೇಳಿದೆ. 'ಥ್ಯಾಂಕ್ ಯು ದೊಡ್ಡಮ್ಮ' ಅಂದಳು. 'ಬ್ಯುಟಿಫುಲ್' ಮತ್ತೊಮ್ಮೆ ಹೇಳಿದೆ. 'ಥ್ಯಾಂಕ್ಯು ಸೋ ಮಚ್ ದೊಡ್ಡಮ್ಮ, ಐ ನೋ, ಐ ಆ್ಯಮ್ ಬ್ಯುಟಿಫುಲ್' ಅಂದಾಗ ನಡೆಯಲಾಗದೆ ಅವಳ ಮುದ್ದು ಮುಖವನ್ನು ಬೊಗಸೆಯಲ್ಲಿ ಹಿಡಿದು ಮುತ್ತು ಕೊಟ್ಟೆ...

**ಸುವರ್ಣಾ ಮಠ**